**4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು**

ಪಿ.ಸಿ.ಆರ್ ನಂ. 7329/2017 ಸಿಡಬ್ಲ್ಯೂ - 1

| | | |
|---|---|---|
| ಸಾಕ್ಷಿದಾರರ ಹೆಸರು | : | ಬಿ.ಹೆಚ್.ಲೊಕೇಶ್ |
| ತಂದೆಯ ಹೆಸರು | : | ಬಿ.ಟಿ.ಹನುಮಂತಪ್ಪ |
| ವಯಸ್ಸು | : | 70 ವರ್ಷ |
| ವೃತ್ತಿ | : | ವ್ಯವಹಾರ |
| ವಾಸ | : | ಗಿರಿನಗರ, ಬೆಂಗಳೂರು |

**ಸಾಕ್ಷಿಯನ್ನು ದಿಃ 05.07.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಿರ್ಯಾದುದಾರರ ಸ್ವ ಇಚ್ಚಾ ಹೇಳಿಕೆ** :

ನಾನು ಇಂಡಸ್ಟ್ರೀಯಲ್ ಎಲೆಕ್ಟ್ರಾನಿಕ್ ಉಪಕರಣಗಳನ್ನು ಸರಬರಾಜು ಮಾಡುವ ಕೆಲಸ ಮಾಡುತ್ತಿದ್ದೇನೆ. ಆರೋಪಿತರು ಇಂಟರ್ ನೆಟ್ ನಲ್ಲಿ ನನ್ನ ಕಂಪನಿಯನ್ನು ಹುಡುಕಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಖರೀದಿ ಮಾಡುವ ಇಚ್ಛೆ ವ್ಯಕ್ತಿ ಪಡಿಸಿ ಎನ್‌ಕ್ವೇರಿಗೆ ಕಳುಹಿಸಿದರು. 2014ನೇ ಇಸವಿಯ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಖರೀದಿಸಲು 03 ಪರ್ಚೇಸ್ ಆರ್ಡರ್ ಕಳುಹಿಸಿರುತ್ತಾರೆ. 1ನೇ ಪರ್ಚೇಸ್ ಆರ್ಡರ್ ನಲ್ಲಿ ರೂ.1,27,437/-, 2ನೇ ಪರ್ಚೇಸ್ ಆರ್ಡರ್ ನಲ್ಲಿ ರೂ.1,69,254/- ಮತ್ತು 3ನೇ ಪರ್ಚೇಸ್ ಆರ್ಡರ್ ನಲ್ಲಿ ರೂ.2,49,513/- ರ ಬಿಲ್ ಮಾಡಿದ್ದೇನೆ. ಮೊದಲ ಎರಡು ಬಿಲ್ ಗಳ ಹಣವನ್ನು 1ನೇ ಆರೋಪಿ ನನಗೆ ಕೊಟ್ಟಿರುತ್ತಾರೆ. ನಾನು ಉಪಕರಣಗಳನ್ನು ಕಳುಹಿಸುವ ಮೊದಲು ಹಣ ಪಡೆಯುತ್ತೇವೆ. ಆರೋಪಿತರು ಎರಡು ಬಾರಿ ಚೆಕ್ ಕಳುಹಿಸಿದರು. ಕೆಲವೊಮ್ಮೆ ಆರ್.ಟಿ.ಜಿ.ಎಸ್. ಕೂಡ ಮಾಡುತ್ತಿದ್ದರು. ಮೊದಲರೆಡು ಪರ್ಚೇಸ್ ಆರ್ಡರ್ ನ ಹಣ ಬಂದ ಮೇಲೆ ಉಪಕರಣಗಳನ್ನು ಸಪ್ಲೇ ಮಾಡಿರುತ್ತೇನೆ. ಅಷ್ಟೋತ್ತಿಗೆ 1ನೇ

ಆರೋಪಿ ಮೇಲೆ ನಂಬಿಕೆ ಬಂದಿದ್ದರಿಂದ 3ನೇ ಪರ್ಚೇಸ್ ಆರ್ಡರ್ ನಲ್ಲಿ ರೂ.2,49,513/- ರ ಬಿಲ್ ಮಾಡಿ ಕಳುಹಿಸಿದೆ, ಆರೋಪಿತರು ಚೆಕ್ ನ ಸ್ಕ್ಯಾನ್ ಮಾಡಿ ಇ-ಮೇಲ್ ಮುಖಾಂತರ ಕಳುಹಿಸಿದರು. ಅದನ್ನು ನಂಬಿ ಇಂಡಸ್ಟ್ರೀಯಲ್ ಎಲೆಕ್ಟ್ರಾನಿಕ್ ಉಪಕರಣಗಳನ್ನು ಕಳುಹಿಸಿದ್ದೆ, ಆದರೆ 1ನೇ ಆರೋಪಿಯಿಂದ ನನಗೆ ಚೆಕ್ ಬರಲಿಲ್ಲ. ನಾನು ಫೋನ್ ಕಾಲ್, ವಾಟ್ಸಪ್ ಮೆಸೇಜ್ ಮತ್ತು ಇ-ಮೇಲ್ ಮಾಡಿದರು 1ನೇ ಆರೋಪಿ ಹಣ ಕಳುಹಿಸಲಿಲ್ಲ. 3ನೇ ಆರೋಪಿ ಅಕೌಂಟೆಂಟ್ ಯಶ್‌ಪಾಲ್ ರವರಿಗೆ ಫೋನ್ ಮೂಲಕ ಈ ಬಗ್ಗೆ ಪೊಲೀಸ್ ದೂರು ನೀಡುತ್ತೇನೆ ಎಂದು ಹೇಳಿದೆನು. ಆಗ ಆರೋಪಿತರು 2015 ರಲ್ಲಿ ರೂ.50 ಸಾವಿರ ಕಳುಹಿಸಿದರು. 2016ನೇ ಇಸವಿಯಲ್ಲಿ ನಾನು ಮತ್ತು ನನ್ನ ಮಗ ಹೋಗಿ 1ನೇ ಆರೋಪಿಯನ್ನು ಭೇಟಿ ಮಾಡಿದೆವು. ಆ ಸಮಯದಲ್ಲಿ 1ನೇ ಆರೋಪಿ ಹಿಂದಿನ ಸಿ.ಮ್ಯಾಕ್ ಇಂಜಿನಿಯರ್ಸ್ ಲಿ. ಕಂಪನಿಯನ್ನು ಮುಚ್ಚಿರುತ್ತೇನೆ. ಈಗ ನನ್ನ ಹೆಂಡತಿಯ ಜೊತೆಗೆ ಸಿ.ಮ್ಯಾಕ್ ಆಟೋಮೇಷನ್ ಪ್ರೈ.ಲಿ. ಎಂಬ ಪಾಲುದಾರಿಕೆ ಸಂಸ್ಥೆಯನ್ನು ತೆರೆದಿದ್ದೇನೆ ಎಂದು ಹೇಳಿದರು. ಆಗ 2016 ರ ಸೆಪ್ಟಂಬರ್ ಕೊನೆಯಲ್ಲಿ 1 ಲಕ್ಷ ಹಾಗೂ ಡಿಸೆಂಬರ್ ನಲ್ಲಿ 1 ಲಕ್ಷ ಆರ್.ಟಿ.ಜಿ.ಎಸ್. ಮಾಡುವುದಾಗಿ ಚೀಟಿಯಲ್ಲಿ ಬರೆದುಕೊಟ್ಟಿದ್ದರು.

1ನೇ ಆರೋಪಿಯೊಂದಿಗೆ ವಾಟ್ಸಪ್ ಮೂಲಕ ಹಣ ಕೊಡುವಂತೆ ಕೇಳಿದಾಗ ಆತ ತುಂಬ ಕೆಟ್ಟ ಭಾಷೆಯಲ್ಲಿ ಹಣ ಕೊಡುವುದಿಲ್ಲ ಬೇಕಾದ್ದು ಮಾಡಿಕೋ ಎಂದು ಹೇಳಿರುತ್ತಾರೆ. ನಾನು 2ನೇ ಬಾರಿ ಆರೋಪಿಯನ್ನು ದೆಹಲಿಯ ಏರ್ ಪೋರ್ಟ್ ನಲ್ಲಿ ಭೇಟಿಯಾದಾಗ ಬೆಂಗಳೂರು ನ್ಯಾಯಾಲಯಕ್ಕೆ ಕಾರ್ಯ ವ್ಯಾಪ್ತಿಯಿಲ್ಲ, ಗಾಜಿಯಾಬಾದ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಬೇಕು ಎಂದು ಹೇಳಿದರು. ನಾನು ಮಿನಿಸ್ಟರ್ ಮಗ, ನಿನ್ನನ್ನು ಮತ್ತು ನಿನ್ನ ಮಗನನ್ನು ವಿಚಾರಿಸಿಕೊಳ್ಳುತ್ತೇನೆ ಎಂದು ವಾಟ್ಸಪ್ ಮೆಸೇಜ್ ನಲ್ಲಿ

ಹೇಳಿರುತ್ತಾರೆ.

ಎರಡು ವರ್ಷದ ನಂತರ ಆರೋಪಿ ಸಿ-ಫಾರಂ ಕಳುಹಿಸಿರುತ್ತಾರೆ. ಈ ಬಗ್ಗೆ ನಾನು ಗಿರಿನಗರ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದೇನೆ. ಇದು ಸಿವಿಲ್ ವಿವಾಧವಾಗಿದ್ದು ನ್ಯಾಯಾಲಯದಲ್ಲಿ ಖಾಸಗಿ ಪಿರ್ಯಾದು ದಾಖಲಿಸಿ ಎಂದು ಪೊಲೀಸರು ಹಿಂಬರಹ ನೀಡಿರುತ್ತಾರೆ. ನಂತರ 2017 ರಲ್ಲಿ ಆರೋಪಿಗೆ ವಕೀಲರ ನೊಟೀಸು ನೀಡಿ ಖಾಸಗಿ ಪ್ರಕರಣ ದಾಖಲಿಸಿರುತ್ತೇನೆ. ನ್ಯಾಯಾಲಯ ಪ್ರ.ವ.ವರಧಿ ದಾಖಲಿಸಿ ತನಿಖೆ ಮಾಡುವಂತೆ ಆದೇಶಿಸಿದ್ದು ಪೊಲೀಸರು ಪ್ರ.ವ.ವರದಿ ದಾಖಲಿಸಿ ನನ್ನನ್ನು ಮತ್ತು ಅಕ್ಕಪಕ್ಕದವರನ್ನು ವಿಚಾರಿಸಿ ನಂತರ ಬಿ ವರದಿ ಸಲ್ಲಿಸಿದರು. ಬಿ ವರದಿಗೆ ನಾನು ಆಕ್ಷೇಪಣೆ ಸಲ್ಲಿಸಿದ್ದೇನೆ. ಬಿ ವರದಿಯನ್ನು ನ್ಯಾಯಾಲಯ ತಿರಸ್ಕರಿಸಿದರು.

ಆರೋಪಿ ತಾನು ಇರುವ ಕಾರ್ಯವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಅಲ್ಲಿಂದ ಅಪರಿಚಿತ ವ್ಯಕ್ತಿಯ ಮೂಲಕ ಈ ಪ್ರಕರಣ ವಾಪಸ್ಸು ಪಡೆಯುವಂತೆ ಬೆದರಿಕೆ ಬಂದಿತ್ತು. ಒಬ್ಬರು ವಕೀಲರು ಕೂಡ ಆರೋಪಿಯ ಕಡೆಯಿಂದ ನನಗೆ ನೊಟೀಸು ಕಳುಹಿಸಿದರು. ಆ ನೊಟೀಸಿಗೆ ಉತ್ತರ ಕೊಟ್ಟ ನಂತರ ಚಾಪ್ರ ಪೊಲೀಸ್ ಠಾಣೆ, ಬಿಹಾರದಲ್ಲಿ ನನ್ನ ವಿರುದ್ದ ಪ್ರಕರಣ ದಾಖಲಿಸಿದರು. ಆ ಪ್ರಕರಣದಲ್ಲಿ ನನಗೆ ದಸ್ತಗಿರಿ ವಾರೆಂಟು ಬಂದಿತ್ತು. ನಾನು ಆ ಪ್ರಕರಣವನ್ನು ಪಾಟ್ನ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ಆ ಪ್ರ ವರದಿ ರದ್ದಾಗಿದೆ.

2ನೇ ಆರೋಪಿ 1ನೇ ಆರೋಪಿಯ ಪರವಾಗಿ ನನ್ನ ವಿರುದ್ದ ದೂರು ಕೊಡಿಸಿದ್ದಾರೆ. ಪರ್ಚೇಸ್ ಆರ್ಡರ್ ಅನ್ನು ಗುರ್ತಿಸುತ್ತೇನೆ. ಅದನ್ನು ನಿಸಿ-1 ಎಂದು ಗುರ್ತಿಸಲಾಯಿತು. ಮೂರು ಇನ್ ವಾಯ್ಸ್ ಗಳನ್ನು ಗುರ್ತಿಸುತ್ತೇನೆ. ಅದನ್ನು ನಿಸಿ-2 ರಿಂದ 4 ಎಂದು ಗುರ್ತಿಸಲಾಯಿತು. ಸ್ಕ್ಯಾನ್ ಚೆಕ್ ನ ಕಾಪಿಯನ್ನು ಗುರ್ತಿಸುತ್ತೇನೆ. ಅದನ್ನು ನಿಸಿ-5 ಎಂದು ಗುರ್ತಿಸಲಾಯಿತು. ಸಿ-ಫಾರಂ ನೀಡುವುದಾಗಿ 1ನೇ ಆರೋಪಿ ಕೊಟ್ಟ ಪತ್ರವನ್ನು ನಿಸಿ-6 ಎಂದು

ಗುರ್ತಿಸಲಾಯಿತು. 1ನೇ ಆರೋಪಿ ನನ್ನೊಂದಿಗೆ ಮಾಡಿದ ಇ-ಮೇಲ್ ಪತ್ರ ವ್ಯವಹಾರ ಹಾಗೂ ವಾಟ್ಸಪ್ ಚಾಟ್ ಅನ್ನು ಗುರ್ತಿಸುತ್ತೇನೆ. ಅದನು ನಿಸಿ-7 ಎಂದು ಗುರ್ತಿಸಲಾಯಿತು. 1ನೇ ಆರೋಪಿ ನೀಡಿದ ಕಮಿಂಟ್ ಮೆಂಟ್ ಲೆಟರ್ ಅನ್ನು ಗುರ್ತಿಸುತ್ತೇನೆ. ಅದನ್ನು ನಿಸಿ-8 ಎಂದು ಗುರ್ತಿಸಲಾಯಿತು. ವಕೀಲರ ನೊಟೀಸನ್ನು ಗುರ್ತಿಸುತ್ತೇನೆ. ಅದನ್ನು ನಿಸಿ-9 ಎಂದು ಗುರ್ತಿಸಲಾಯಿತು. ಅಂಚೆ ರಶೀದಿಯನ್ನು ನಿಸಿ-9ಎ, ಅಂಚೆ ಸ್ವೀಕೃತಿ ಪತ್ರವನ್ನು ನಿಸಿ-9ಬಿ ಎಂದು ಗುರ್ತಿಸಲಾಯಿತು. ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿ ಪ್ರಮಾಣ ಪತ್ರವನ್ನು ನಿಸಿ-10 ಎಂದು ಗುರ್ತಿಸಲಾಯಿತು. ಆದ್ದರಿಂದ ಆರೋಪಿತರ ವಿರುದ್ದ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿಕೊಳ್ಳುತ್ತೇನೆ.

(ಸಾಕ್ಷಿಯ ನೀಡಿದ ಹೇಳಿಕೆಯನ್ನು ಯಥವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**4ನೇ ಅ ಮು ನ್ಯಾ ದಂ ನ್ಯಾ**